# ಎನ್ಐಟಿಕೆಯಲ್ಲಿ ಆವಿಷ್ಕಾರಗಳ ಅನಾವರಣ

**ಮಂಗಳೂರು:** ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ(ಎನ್ಐಟಿಕೆ)ದ ಇನ್ಸ್ಟಿಟ್ಯೂಷನ್ ಇನ್ನೋವೇಶನ್ ಕೌನ್ಸಿಲ್ (ಐಐಸಿ) ಶನಿವಾರದಂದು ಮಂಗಳೂರಿನ ಸುರತ್ಕಲ್ ಕ್ಯಾಂಪಸ್‌ನಲ್ಲಿ 'ಅನ್ಲೀಶಿಂಗ್ ಇನ್ನೋವೇಶನ್ಸ್ - ಫಾರ್ ಮತ್ತು ಗ್ರಾಸ್‌ರೂಟ್‌ನಿಂದ' ಎಂಬ ಕಾರ್ಯಾಗಾರ ಆಯೋಜಿಸಿತ್ತು.

ನ್ಯಾಷನಲ್ ಇನ್ನೋವೇಶನ್ ಫೌಂಡೇಶನ್‌ನ ಮಾಜಿ ಕಾರ್ಯನಿರ್ವಾಹಕ ಉಪಾಧ್ಯಕ್ಷ ಪ್ರೊ.ಅನಿಲ್ ಕುಮಾರ್ ಗುಪ್ತಾ, ಗ್ರಾಸ್‌ರೂಟ್ಸ್ ಇನ್ನೋವೇಶನ್ ಆಗ್ಮೆಂಟೇಶನ್ ನೆಟ್‌ವರ್ಕ್‌ನ ನಿರ್ದೇಶಕಿ ಪ್ರೊ. ಅನಾಮಿಕಾ ಡೇ ಭಾಗವಹಿಸಿದ್ದರು.

ಎನ್ಐಟಿಕೆ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರೀಯ ಸಂಶೋಧನಾ ಸೌಲಭ್ಯ ಮತ್ತು ಇನ್ಸ್ಟಿಟ್ಯೂಟ್ ಇನ್ನೋವೇಶನ್ ಕೌನ್ಸಿಲ್ ಮತ್ತು ಇ-ಸೆಲ್ ಆಯೋಜಿಸಿದ ಸ್ಟಾರ್ಟ್-ಅಪ್ ಎಕ್ಸ್‌ಪೋಗೆ ಶಿಬಿರಾರ್ಥಿಗಳು ಭೇಟಿ ನೀಡಿದರು. ಇದರಲ್ಲಿ ಹಲವಾರು ಸ್ಥಳೀಯ ಸ್ಟಾರ್ಟ್-ಅಪ್‌ಗಳು ತಮ್ಮ ಆವಿಷ್ಕಾರಗಳನ್ನು ಪ್ರದರ್ಶಿಸಿದವು.

ಎನ್ಐಟಿಕೆ ನಿರ್ದೇಶಕ ಪ್ರೊ.ಬಿ.ರವಿ, ಇನ್ಸ್ಟಿಟ್ಯೂಟ್ ಇನ್ನೋವೇಶನ್ ಕೌನ್ಸಿಲ್‌ನ ಪ್ರಭಾರಿ ಪ್ರೊಫೆಸರ್ ಶ್ರೀವಲ್ಸ ಕೊಳತಯಾರ್ ಇದ್ದರು.



ಎನ್ಐಟಿಕೆಯ ಇನ್ಸ್ಟಿಟ್ಯೂಷನ್ ಇನ್ನೋವೇಶನ್ ಕೌನ್ಸಿಲ್ (ಐಐಸಿ) ಸುರತ್ಕಲ್ ಕ್ಯಾಂಪಸ್‌ನಲ್ಲಿ 'ಅನ್ಲೀಶಿಂಗ್ ಇನ್ನೋವೇಶನ್ಸ್ - ಫಾರ್ ಮತ್ತು ಗ್ರಾಸ್ ರೂಟ್‌ನಿಂದ' ಎಂಬ ಕಾರ್ಯಾಗಾರ ನಡೆಯಿತು. ನ್ಯಾಷನಲ್ ಇನ್ನೋವೇಶನ್ ಫೌಂಡೇಶನ್‌ನ ಮಾಜಿ ಕಾರ್ಯನಿರ್ವಾಹಕ ಉಪಾಧ್ಯಕ್ಷ ಪ್ರೊ.ಅನಿಲ್ ಕುಮಾರ್ ಗುಪ್ತಾ, ಗ್ರಾಸ್‌ರೂಟ್ಸ್ ಇನ್ನೋವೇಶನ್ ಆಗ್ಮೆಂಟೇಶನ್ ನೆಟ್‌ವರ್ಕ್‌ನ ನಿರ್ದೇಶಕಿ ಪ್ರೊ.ಅನಾಮಿಕಾ ಡೇ ಮೊದಲಾದವರಿದ್ದರು.

Vijayavani, Date:26/02/24, p. no -05